ತಾಕತ್ತಿದ್ದರೆ, ತೊಂದರೆಗಳನ್ನು ಎದುರಿಸಲು ಧೈರ್ಯವಿದ್ದರೆ, ಖಂಡಿತವಾಗಿ ಮಹಾರಾಜರನ್ನು ಉಳಿಸಬಹುದು' ಎಂದ ಮುದಿ ಮನುಷ್ಯ. 'ಅದು ಎಲ್ಲಿ ಸಿಗುತ್ತೆ ಎಂದು ತಿಳಿಸಿದರೆ ಜೀವಜಲವನ್ನು ತರಲು ಈಗಲೇ ಹೊರಡುತ್ತೇನೆ. ದಯವಿಟ್ಟು ತಿಳಿಸಿ ಎಂದ' ಹಿರಿಯ ರಾಜಕುಮಾರ. 'ನನಗೂ ಸರಿಯಾಗಿ ತಿಳಿಯದು. ಹುಡುಕಿಕೊಂಡು ಹೋಗಬೇಕು. ಅದು ಇರುವುದಂತು ಖಂಡಿತ' ಎಂದು ಹೇಳಿ ಹೊರಟುಹೋದ ಆ ಮನುಷ್ಯ. ಹಿರಿಯ ರಾಜಕುಮಾರ ಕೂಡಲೇ ತನ್ನ ಕುದುರೆಯನ್ನು ಏರಿ ಹೊರಟುಬಿಟ್ಟ. ಅಷ್ಟು ದೂರ ಸಾಗಿದಾಗ ಅವನಿಗೊಂದು ಆಳವಾದ ಕಣಿವೆ ಸಿಕ್ಕಿತು. ಅದರ ಅಂಚಿನ ಬಳಿ ಕುಳಿತಿದ್ದ ಕುಳ್ಳನೊಬ್ಬ ರಾಜಕುಮಾರನ ಕಂಡ ಕೂಡಲೇ 'ಹೋಯ್! ಎತ್ತಲಾಗಿ ನಿನ್ನ ಪಯಣ?' ಎಂದು ಅರಚಿದ.

'ನಾನು ಎತ್ತಲಾಗಿ ಹೊರಟರೆ ನಿನಗೇನು? ಸುಮ್ಮನೆ ಹೋಗು' ಎಂದು ಒರಟಾಗಿ ಉತ್ತರಿಸಿದ ರಾಜಕುಮಾರನನ್ನು ಕಂಡು ಕುಳ್ಳ ಕೇಕೆಹಾಕಿ ನಕ್ಕು ಕಣ್ಮರೆಯಾದ. ಸ್ವಲ್ಪ ಹೊತ್ತಿಗೆಲ್ಲ ರಾಜಕುಮಾರ ಎತ್ತ ತಿರುಗಿದರತ್ತ ಅವನೆದುರಿಗೆ ಬೆಟ್ಟವೇ ಎದುರಾಗಿ ಸುತ್ತುವರಿಯಿತು. ಹಿಂದೂ ಹೋಗಲಾರದೆ, ಮುಂದೂ ಸಾಗಲಾರದೆ ಅವನು ಆ ಕಣಿವೆಯಲ್ಲೇ ಬಂದಿಯಾದ.

ಅರಮನೆಯಲ್ಲಿ ಮಿಕ್ಕವರಿಬ್ಬರು ಅಣ್ಣನ ದಾರಿ ಕಾದೇ ಕಾದರು. ಅವನು ಬರಲೇ ಇಲ್ಲ. ರಾಜನ ಬೇನೆ ಇನ್ನೂ ಹೆಚ್ಚಾಯಿತು. ಎರಡನೇ ರಾಜಕುಮಾರ ಮರುದಿನ ಬೆಳಿಗ್ಗೆ ಕುದುರೆ ಏರಿ ಹೊರಟ. ಅವನಿಗೂ ಕುಳ್ಳ ಎದುರಾಗಿ, 'ಹೋಯ್, ಎತ್ತ ನಿನ್ನ ಪಯಣ?' ಎಂದು ಕೇಳಿದ. ರಾಜಕುಮಾರ ಸಿಟ್ಟಿನಿಂದ 'ದಾರಿ ಬಿಡು. ತಲೆ ಹರಟೆ. ನಾನು ಅವಸರದ ಕೆಲಸಕ್ಕೆ ಹೊರಟಿದ್ದೇನೆ. ಅಡ್ಡ ಬರಬೇಡ' ಎಂದು ಗದರಿದ.

'ಆಗಲಿ, ಆಗಲಿ, ಹೋಗುವಿಯಂತೆ' ಎಂದು ಜೋರಾಗಿ ನಕ್ಕು ಆ ಕುಳ್ಳ ಕಣ್ಮರೆಯಾದ. ಇವನಿಗೂ ಇವನಣ್ಣನಂತೆ ಬೆಟ್ಟ ಸುತ್ತುವರಿದು ದಾರಿ ಕಾಣದಾಯಿತು.

ಮೂರನೆಯ ರಾಜಕುಮಾರ ತನ್ನ ಅಣ್ಣಂದಿರಿಬ್ಬರಿಗೂ ಕಾದು ಸಾಕಾಗಿ ಕಡೆಗೆ ಮಂತ್ರಿಗೆ ವಿಷಯ ತಿಳಿಸಿ, ತಾನೂ ತನ್ನ ಬಿಳಿಯ ಕುದುರೆಯನ್ನೇರಿ ಹೊರಟ. ಅವನಿಗೂ ಕಣಿವೆಯ ಬಳಿ ಕುಳ್ಳ ಎದುರಾಗಿ, 'ಓ, ಎತ್ತ ಪಯಣ?' ಎಂದು ಕೇಳಿದ. ರಾಜಕುಮಾರ ವಿನಯದಿಂದ, 'ನಾನು ಜೀವಜಲ ಹುಡುಕಿಕೊಂಡು ಹೊರಟಿದ್ದೇನೆ ತಾತ. ನಮ್ಮ ತಂದೆಗೆ ತುಂಬಾ ಕಾಯಿಲೆಯಾಗಿದೆ. ಅದನ್ನು ಕುಡಿಸಿದರೆ ಬೇಗ ಗುಣವಾಗುವುದಂತೆ. ನಿನಗೆ ಗೊತ್ತಿದ್ದರೆ ದಯಮಾಡಿ ದಾರಿ ತಿಳಿಸು. ತುಂಬಾ ಉಪಕಾರವಾಗುತ್ತದೆ' ಎಂದು ಕೈ ಮುಗಿದ.

ಕುಳ್ಳನಿಗೆ ತುಂಬಾ ಸಂತೋಷವಾಯಿತು. 'ಒಳ್ಳೇದು, ಜೀವಜಲ ಇಲ್ಲೇ ಸ್ವಲ್ಪ ದೂರದಲ್ಲಿರುವ ಒಂದು ಅರಮನೆಯ ಬಾವಿಯಲ್ಲಿ ಚಿಮ್ಮುತ್ತಿದೆ. ಇಲ್ಲಿ ನೋಡು. ಈ ದಂಡ ಮತ್ತು ಈ ಎರಡು ರೊಟ್ಟಿಗಳ ಸಹಾಯದಿಂದ ನೀನು ಅಲ್ಲಿಗೆ ಸುರಕ್ಷಿತವಾಗಿ ಹೋಗಬಹುದು. ಈ ದಂಡದಿಂದ ಮೂರು ಬಾರಿ ಅರಮನೆಯ ಬಾಗಿಲಿಗೆ ಕುಟ್ಟು. ಬಾಗಿಲು ತಾನಾಗಿ ತೆರೆಯುತ್ತದೆ. ಒಳಗೆ ಎರಡು ಸಿಂಹಗಳು ಬೇಟೆಗೆ ಕಾದು ಕುಳಿತಿವೆ. ಹೆದರಬೇಡ. ಈ ಯಕ್ಷಿಣಿ ರೊಟ್ಟಿಯ ಎರಡು ಚೂರನ್ನು ಅವಕ್ಕೆ ಎಸೆ. ಅವು ನಿನ್ನನ್ನು ಏನೂ ಮಾಡುವುದಿಲ್ಲ. ಒಳಗೆ ಹೋಗಿ ಬೇಗ ಜೀವಜಲ ತುಂಬಿಕೋ. ಆದರೆ ನೆನಪಿರಲಿ, 12 ಗಂಟೆಗೆ ಸರಿಯಾಗಿ ಅರಮನೆಯ ಬಾಗಿಲು ಮುಚ್ಚಿಕೊಳ್ಳುತ್ತದೆ. ನೀನು ಹೊರಗೆ ಬರುವುದು ತಡವಾದರೆ ಅಲ್ಲಿಯೇ ಬಂದಿಯಾಗುತ್ತೀಯೆ. ಯಾವುದೇ ಕಾರಣಕ್ಕೂ ನಿಧಾನಿಸಬೇಡ' ಎಂದು ಎಚ್ಚರ ಹೇಳಿ ಅವನಿಗೆ ಆ ದಂಡವನ್ನೂ ರೊಟ್ಟಿಯನ್ನೂ ಕೊಟ್ಟನು.